
# ೨ ಕಲೆಯಲ್ಲಿ ಸಸ್ಯಗಳು

ನಮ್ಮ ಸುತ್ತಮುತ್ತಲೂ ನಾವು ಅನೇಕ ಸಸ್ಯಗಳನ್ನು ನೋಡುತ್ತೇವೆ. ಈ ಅಧ್ಯಾಯದ ಅಂತ್ಯದ ವೇಳೆಗೆ, ನೀವು ಕಥೆಗಳ ಮೂಲಕ ಸಸ್ಯಗಳ ಮಹತ್ವವನ್ನು ಅರ್ಥಮಾಡಿಕೊಳ್ಳುವಿರಿ ಮತ್ತು ಉದ್ಯಾನಗಳು, ಪಾರ್ಕಗಳು, ಹೊಲಗಳು, ಫಾರ್ಮ್‌ಗಳು ಅಥವಾ ನಿಮ್ಮ ಸುತ್ತಮುತ್ತಲಿನ ಯಾವುದೇ ಕಾಡು ಪ್ರದೇಶಗಳಲ್ಲಿ ಪ್ರಕೃತಿ ನಡಿಗೆಯ ಮೂಲಕ ಅವುಗಳ ಸೌಂದರ್ಯವನ್ನು ಅನ್ವೇಷಿಸುವಿರಿ. ಪ್ರಕೃತಿಗೆ ಸಂಬಂಧಿಸಿದ ಕೆಲವು ಕಥೆಗಳನ್ನು ನೀವು ನೆನಪಿಸಿಕೊಳ್ಳಲು ಮತ್ತು ಇವೆಲ್ಲವನ್ನೂ ನಿಮ್ಮ ಕಲಾಕೃತಿಗಳ ಮೂಲಕ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ನೀವು ಪ್ರಕೃತಿಯಲ್ಲಿ ವಿವಿಧ **ರೇಖೆಗಳು, ಆಕಾರಗಳು, ಬಣ್ಣಗಳು** ಮತ್ತು **ಮಾದರಿಗಳನ್ನು** ಸಹ ಗಮನಿಸುತ್ತೀರಿ ಮತ್ತು ಇವುಗಳನ್ನು ಬಟ್ಟೆಗಳಲ್ಲಿ ಕಂಡುಬರುವ ವಿನ್ಯಾಸಗಳೊಂದಿಗೆ ಸಂಪರ್ಕಿಸುತ್ತೀರಿ.










ಕಡ್ಡಿಗಳು, ಬೀಜಗಳು, ಬೆಣಚುಕಲ್ಲುಗಳು, ಒಣಗಿದ ಎಲೆಗಳು ಮತ್ತು ಹೂವುಗಳು ಮತ್ತು ನೀವು ಕಂಡುಕೊಳ್ಳುವ ಇತರ ವಸ್ತುಗಳಂತಹ ನೈಸರ್ಗಿಕ ವಸ್ತುಗಳನ್ನು ನೀವು ಸಂಗ್ರಹಿಸಬಹುದು ಮತ್ತು ಪ್ರಯೋಗಿಸಬಹುದು. ನೀವು ನಿಮ್ಮ ಸ್ವಂತ ಕಾಲ್ಪನಿಕ ಚಿತ್ರಗಳನ್ನು ಸಹ ರಚಿಸಬಹುದು. ಚಿತ್ರಕಲೆ, ಬಣ್ಣ ಮತ್ತು ಕರಕುಶಲ ಕೆಲಸದ ಮೂಲಕ ಉಡುಪುಗಳು, ಗ್ರೀಟಿಂಗ್ ಕಾರ್ಡ್‌ಗಳು, ಪುಟ ಅಂಚುಗಳು ಮತ್ತು ಸ್ಟೆನ್ಸಿಲ್‌ಗಳಿಗೆ ನಿಮ್ಮ ಸ್ವಂತ ವಿನ್ಯಾಸಗಳನ್ನು ನೀವೇ ಮಾಡಬಹುದು.

## ಚಟುವಟಿಕೆ ೧ ಪ್ರಕೃತಿ ನಡಿಗೆ ಮತ್ತು ಚಿತ್ರಕಲೆ

ನಿಮ್ಮ ತರಗತಿಯ ಹೊರಗೆ ಹೆಜ್ಜೆ ಹಾಕಿ ಮತ್ತು ಶಾಲೆಯ ಉದ್ಯಾನ, ವಿಹಾರೋದ್ಯಾನ, ಹೊಲ, ಕೃಷಿಜಾಗ ಅಥವಾ ಇನ್ನವುದೋ ಸುರಕ್ಷಿತವಾದ ಕಾಡು ಪ್ರದೇಶ ಮತ್ತು ಅನೇಕ ಸಸ್ಯಗಳನ್ನು ಹೊಂದಿರುವ ಸ್ಥಳಕ್ಕೆ ಭೇಟಿ ನೀಡಿ.

ಎಲೆಗಳು, ಹೂವುಗಳು, ಕಾಂಡಗಳು, ತೊಗಟೆಗಳು, ಕೀಟಗಳು, ಚಿಟ್ಟೆಗಳು, ಕೊಂಬೆಗಳು, ಹಣ್ಣುಗಳು, ಬೀಜಗಳು ಮತ್ತು ಬೇರುಗಳನ್ನು ನಿಧಾನವಾಗಿ ಸ್ಪರ್ಶಿಸಿ ಮತ್ತು ಹತ್ತಿರದಿಂದ ನೋಡಿ. ನೀವು ಯಾವ ರೀತಿಯ **ರೇಖೆಗಳು, ಆಕಾರಗಳು, ಬಣ್ಣಗಳು** ಮತ್ತು **ಮಾದರಿಗಳನ್ನು** ನೋಡುತ್ತೀರಿ? ಅವುಗಳನ್ನು ಸ್ಪರ್ಶಿಸಲು ನಿಮಗೆ ಹೇಗೆ ಅನಿಸುತ್ತದೆ?



**ನಿಮ್ಮ ಚಿತ್ರಕಲೆ/ಡ್ರಾಯಿಂಗ್ ಬುಕ್ ಅಥವಾ ಕಾಗದ ಮತ್ತು ಪೆನ್ಸಿಲನ್ನು ಜೊತೆಗೆ ಒಯ್ಯಿರಿ.**

## ಚಟುವಟಿಕೆ ೨ ಪ್ರಕೃತಿಯಿಂದ ಸೆಳೆಯಿರಿ/ತೆಗೆದುಕೊಳ್ಳಿ


ವಿವಿಧ ಆಕಾರಗಳ ಮೂರು ಅಥವಾ ನಾಲ್ಕು ಎಲೆಗಳು, ಹೂವುಗಳು ಅಥವಾ ಪಕ್ಷಿಗಳ ಬಾಹ್ಯರೇಖೆಗಳನ್ನು ಚಿತ್ರಿಸಿ ಮತ್ತು ಬಣ್ಣ ಮಾಡಿ.



**ಮುಂದುವರಿಸಿ: ನಿಮ್ಮ ಸ್ವಂತ ನೈಸರ್ಗಿಕ ಬಣ್ಣಗಳನ್ನು ಮಾಡಿ. ನಿಮ್ಮ ಸುತ್ತಮುತ್ತಲಿನಲ್ಲಿರುವ ಹಣ್ಣು, ತರಕಾರಿ, ಬೇರು, ಹೂವು ಅಥವಾ ಎಲೆಗಳ ಸಣ್ಣ ಭಾಗಗಳನ್ನು ತೆಗೆದುಕೊಳ್ಳಿ. ಅವುಗಳನ್ನು ಪುಡಿಮಾಡಿ, ಮತ್ತು ಸ್ವಲ್ಪ ನೀರಿನೊಂದಿಗೆ ಕುಟ್ಟಿ ಪುಡಿ ಮಾಡಿ ಮತ್ತು ನೀವು ಯಾವ ಬಣ್ಣಗಳನ್ನು ಪಡೆಯುತ್ತೀರಿ ಎಂದು ನೋಡಿ!**

© NCERT not to be republished

## ಚಟುವಟಿಕೆ ೩ ರಸಭರಿತ ಬಣ್ಣಗಳು!



ಎಲೆಗಳು, ಹಣ್ಣುಗಳು ಮತ್ತು ಹೂವುಗಳಿಂದ ಬಣ್ಣವನ್ನು ಹೊರ ತೆಗೆಯಬಹುದು.

ನೀವು ಕೆಳಗಿನವುಗಳನ್ನು ತಿನ್ನುವಾಗ ನಿಮ್ಮ ನಾಲಿಗೆಯ ಬಣ್ಣವೇನಾಗಿರುತ್ತದೆ -

**ಬೀಟ್ರೂಟ್**

**ಜಾಮೂನು**

**ಮಾವು**

ಮೇಲಿನ ಆಕಾರಗಳ ಒಳಗೆ ಬಣ್ಣ ಮಾಡಿ.

ನೈಸರ್ಗಿಕ ಬಣ್ಣಗಳನ್ನು ಬಳಸಿಕೊಂಡು ಮೇಲಿನ ಪೆಟ್ಟಿಗೆಯಲ್ಲಿ ನೀವು ಚಿತ್ರವನ್ನು ಬಿಡಿಸಬಹುದು ಮತ್ತು ಬಣ್ಣ ಮಾಡಬಹುದು.

© NCERT not to be republished

## ಚಟುವಟಿಕೆ ೪ ಕಟ್ಟಡಗಳಲ್ಲಿ ಜಾಲಿ (ಗ್ರಿಲ್)

ಗ್ರಿಲ್ ಅನ್ನು ಜಾಲಿ ಎಂದೂ ಕರೆಯಲಾಗುತ್ತದೆ.

ಕೆಲವೊಮ್ಮೆ, ಪ್ರಕೃತಿಯಿಂದ ಅಥವಾ ರೇಖಾಗಣಿತದ/ಜ್ಯಾಮಿತೀಯ ಆಕಾರಗಳಿಂದ ಪಡೆದ ಮಾದರಿಗಳನ್ನು ಈ ಜಾಲಿಗಳಲ್ಲಿ ಕೆತ್ತಲಾಗುತ್ತದೆ.
ನಿಮ್ಮ ಸುತ್ತಮುತ್ತಲಿನ ಕಟ್ಟಡಗಳಲ್ಲಿ ನೀವು ಯಾವ ರೀತಿಯ ಕಿಟಕಿ ಗ್ರಿಲ್‌ಗಳನ್ನು ನೋಡಿದ್ದೀರಿ?

____________________________

____________________________

____________________________

____________________________



ಕಿಟಕಿಗಳು ಅಥವಾ ಬಾಗಿಲು ಗ್ರಿಲ್‌ಗಳಲ್ಲಿನ ವಿನ್ಯಾಸಗಳನ್ನು ನೀವು ಗಮನಿಸಿದ್ದೀರಾ?

**ಕೆತ್ತಿದ ಜಾಲಿಯನ್ನು ಹೊಂದಿರುವ ಕಟ್ಟಡ ಅಥವಾ ಸ್ಮಾರಕಕ್ಕೆ ಭೇಟಿ ನೀಡಿ. ನೀವು ಅಲ್ಲಿ ನೋಡುವ ಜಾಲಿಗಳ ಮಾದರಿಗಳನ್ನು ಚಿತ್ರಿಸಿ.**

not to

ಪೆನ್ಸಿಲ್ ಬಳಸಿ, ಖಾಲಿ ಜಾಗಗಳನ್ನು ನಿಮ್ಮ ಸ್ವಂತ ಜಾಲಿ ಮಾದರಿ ವಿನ್ಯಾಸವನ್ನು ಭರ್ತಿ ಮಾಡಿ.



© NCERT not to be republished

## ಚಟುವಟಿಕೆ ೫ ನಿಮ್ಮ ಸ್ವಂತ ಜಾಲಿಯನ್ನು ಮಾಡಿ

**ಈ ಚಟುವಟಿಕೆಯಲ್ಲಿ ಕತ್ತರಿಯನ್ನು ಬಳಸುವಾಗ ಬಹಳ ಜಾಗರೂಕರಾಗಿರಿ. ನಿಮ್ಮ ಶಿಕ್ಷಕರು ಅಥವಾ ಪೋಷಕರಿಂದ ಸಹಾಯ ಪಡೆಯಿರಿ.**

ಜಾಲಿ ತಯಾರಿಸುವಾಗ ಕತ್ತರಿಸಲು ಅಥವಾ ಮಡಚಲು ತೊಂದರೆಗಳನ್ನು ಎದುರಿಸುತ್ತಿರುವ ನಿಮ್ಮ ಸ್ನೇಹಿತನಿಗೆ ಸಹಾಯ ಮಾಡಿ ಮತ್ತು ಬೆಂಬಲಿಸಿ.

**ಹಂತ ೧**

ಹಳೆಯ ಪತ್ರಿಕೆಯೊಂದನ್ನು ತೆಗೆದುಕೊಂಡು ಪರ್ಯಾಯವಾಗಿ ಹಲವು ಮಡಿಕೆಗಳನ್ನು ಮಾಡಿ.



**ಹಂತ ೨**

ಎರಡು ಅಥವಾ ಮೂರು ವಿಭಿನ್ನ ಎಲೆ ಆಕಾರಗಳನ್ನು ಚಿತ್ರಿಸಿ.



**ಹಂತ ೩**

ಎಲ್ಲಾ ಮಡಿಕೆಗಳನ್ನು ಸರಿಹೊಂದಿಸಿ, ಆಕಾರಗಳನ್ನು ಕತ್ತರಿಸಿ.



**ಹಂತ ೪**


ಮಡಿಕೆಗಳನ್ನು ತೆರೆದು ನಿಮ್ಮ ಜಾಲಿಯನ್ನು ನೋಡಿ. ಅದಕ್ಕೆ ಬಣ್ಣ ಹಚ್ಚಿ!



**ಈಗ, ನಿಮ್ಮ ಸ್ವಂತ ಜಾಲಿಯನ್ನು ಸ್ಟೆನ್ಸಿಲ್ ಆಗಿ ಬಳಸಿ ಮತ್ತು ಕಾಗದದ ಮೇಲೆ ವಿನ್ಯಾಸವನ್ನು ರಚಿಸಿ. ಅದಕ್ಕೆ ಬಣ್ಣ ಹಚ್ಚಿ! ಇಲ್ಲಿ ಕೊಟ್ಟಿರುವ ಮಾದರಿಯನ್ನು ನೋಡಿರಿ.**







© NCERT not to be republished

## ಚಟುವಟಿಕೆ ೭ ಚಿತ್ರಗಳಲ್ಲಿ ಕಥೆಗಳು

ಸಸ್ಯಗಳು ಅಥವಾ ಮರಗಳ ಬಗ್ಗೆ ನಿಮಗೆ ಯಾವುದಾದರೂ ಕಥೆ ಗೊತ್ತಿದಯೇ? ಕಥೆಯನ್ನು ಹೇಳುವ ಚಿತ್ರವನ್ನು ಬಿಡಿಸಿ ಮತ್ತು ಬಣ್ಣ ಹಾಕಿ.



**ಶಿಕ್ಷಕರಿಗೆ ಟಿಪ್ಪಣಿ**

ಸಸ್ಯಗಳು, ಮರಗಳು, ಪ್ರಾಣಿಗಳು ಇತ್ಯಾದಿಗಳ ಬಗ್ಗೆ ಕಥೆಯನ್ನು ಹೇಳಲು ಎಲ್ಲಾ ಮಕ್ಕಳನ್ನು ಕೇಳಬಹುದು.



© NCERT not to be republished

ಬಟ್ಟೆಗಳು, ಜವಳಿ, ಚಿತ್ರಗಳು ಮತ್ತು ಮನೆಯಲ್ಲಿ ನೀವು ಕಂಡುಕೊಳ್ಳುವ ಇತರ ವಸ್ತುಗಳಲ್ಲಿ ಕೆಲವು ಸಸ್ಯ ವಿನ್ಯಾಸಗಳನ್ನು ಕಂಡುಹಿಡಿಯಿರಿ. ಅವುಗಳನ್ನು ಇಲ್ಲಿ ಚಿತ್ರಿಸಿ.





© NCERT not to be republished

## ಚಟುವಟಿಕೆ ೭ ಸಸ್ಯದ ಮೂಲಾಂಶಗಳೊಂದಿಗೆ ಚಿತ್ರ ಬಿಡಿಸಿ

ನಿಮ್ಮ ವಸ್ತುಗಳನ್ನು ಆರಿಸಿ: ಖಾಲಿ/ಪ್ಲೇನ್ ಕಾಗದ, ಚಾರ್ಟ್ ಪೇಪರ್, ಹಳೆಯ ಚಿಂದಿ ರಗ್‌ಗಳು, ಹಳೆಯ ಪತ್ರಿಕೆ ಅಥವಾ ಬಣ್ಣದ ಕಾಗದಗಳು, ದಾರ, ನೈಸರ್ಗಿಕ ವಸ್ತುಗಳಂತಹ, ಬೀಜಗಳು, ಹೂವುಗಳು, ಎಲೆಗಳು, ನೆಲದ ಮೇಲೆ ಬಿದ್ದ ದಳಗಳು ಮತ್ತು ಅಂಟು.

**ಸಸ್ಯಗಳಿಂದ ತಾಜಾ ಹೂವುಗಳು ಮತ್ತು ಎಲೆಗಳನ್ನು ಕೀಳುವುದನ್ನು ತಪ್ಪಿಸಿ!**



ನಿಮ್ಮ ಆಲೋಚನೆಗಳು ಮತ್ತು ಸಾಮಗ್ರಿಗಳ ಆಯ್ಕೆಯನ್ನು ನಿಮ್ಮ ಶಿಕ್ಷಕರು ಮತ್ತು ಸಮಾನಮನಸ್ಕರೊಂದಿಗೆ ಚರ್ಚಿಸಿ. ನೀವು ಗ್ರೀಟಿಂಗ್ ಕಾರ್ಡ್ ಅಥವಾ ಪುಟ ಬಾರ್ಡರ್ ಮಾಡಬಹುದು. ನಿಮ್ಮ ಆಲೋಚನೆಗಳನ್ನು ಇಲ್ಲಿ ಬರೆಯಿರಿ.

© NCERT not to be republished